# ನಿಮ್ಮ ಹೆಂಡತಿಯೂ ಹೀಗೇನಾ?



■ ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ಕಲೆ: ಸಂತೋಷ್ ಸಸಿಹಿತ್ಲು

ಮದುವೆಯಾಗಿ ಆಗಲೇ ಎಂಟು ವರ್ಷಗಳಾಗಿತ್ತು. ಆಫೀಸಲ್ಲಿ ಬೇಸರವಾದಾಗೊಮ್ಮೆ ಮನೆಗೆ ಫೋನ್ ಮಾಡಿ 'ಚಿನ್ನಾ, ಏನ್ಮಾಡ್ತಿದೀಯ?' ಎಂದು ಕೇಳಿದರೆ 'ರೀ, ಮಾಡೋದೇನು? ಅದೇ ಕೂಳು ಬೇಯಿಸ್ತಾ ಇದ್ದೀನಿ' ಎಂಬ ಉತ್ತರ! ಫೋನ್ ಮಾಡದೇ ಇದ್ದರೆ ಸಂಜೆ ಮನೆಗೆ ಬಂದ ಕೂಡಲೇ ಬರಸಿಡಿಲು, 'ಮನೇಲಿ ಒಂದು ಬಡಪಾಯಿ ಇದೆ, ಏನು ಮಾಡ್ತಾ ಇದೆಯೋ ಎಂದು ಫೋನ್ ಮಾಡಿ ಕೇಳಲಾಗದಷ್ಟು ಬ್ಯುಸೀನಾ?', ಪತಿರಾಯ ಸುಸ್ತು.

ಮರುದಿನ ಮರೆಯದೇ ಬಹಳಷ್ಟು ಕೆಲಸಗಳ ಮಧ್ಯೆ ಬಿಡುವು ಮಾಡಿಕೊಂಡು ಫೋನಾಯಿಸಿದರೆ 'ಏನ್ ಜನಾರೀ ನೀವು, ಕೆಲಸದ ಸಮಯದಲ್ಲಿ ಯಾಕೆ ತಲೆ ತಿನ್ತೀರಿ' ಉತ್ತರ. ಕೇಳಿ ತಲೆ ತುರಿಸಿಕೊಂಡು ಇವಳ ಸಹವಾಸವೇ ಬೇಡವೆಂದು ನಾಲ್ಕೈದು ದಿನ ಫೋನೇ ಮಾಡದಿದ್ದರೆ ಐದನೇ ದಿನ ವ್ಯಗ್ರಳಾಗುತ್ತಾಳೆ!

'ಯಾಕೆ? ಏನಾದರೂ ಲಾಭ ಆಗಬೇಕಿದ್ದರೆ ಮಾತ್ರ ಫೋನ್ ಮಾಡೋದಾ? ಇಲ್ಲದಿದ್ದರೆ ನನ್ನ ನೆನಪೇ ಆಗೋಲ್ಲವಾ?' ಈ ಬಡಪ್ರಾಣಿ ಕಕ್ಕಾಬಿಕ್ಕಿ!

ಈ ಹೆಂಡತಿಯರೇ ಹೀಗೇ ಏನೋ? ನಾವು ಏತಿ ಅಂದರೆ ಅವರು ಪ್ರೇತಿ ಎನ್ನುತ್ತಾರೆ! ಗಂಡ ಏನೇ ಹೇಳಿದರೂ ಅದಕ್ಕೆ ವ್ಯತಿರಿಕ್ತವಾಗಿ ಸಾಗುವುದು ಅವರ ಗುರಿಯೆನಿಸುತ್ತದೆ. ಇದರಲ್ಲಿ ಪತಿಯ ಮೇಲೆ ಅಧಿಕಾರದ ಗುರಿಯ ಜೊತೆಗೆ ಅವನಿಗೆ ಲಗಾಮು ಹಾಕಿ ತನ್ನ ಅಂಕುಶದಲ್ಲಿ ಇಟ್ಟುಕೊಳ್ಳುವ ಹುನ್ನಾರವೂ ಖಂಡಿತ ಇದೆ ಎಂಬುದು ನನ್ನ ಅಭಿಮತ. ಹೀಗಾಗಿ ಗಂಡನೆಂಬ ಹುಲುಮಾನವ ತಾನು ಯಾವ ರೀತಿ ಇರಬೇಕೆನ್ನುವುದನ್ನು ಅರಿಯದ ಎಡಬಿಡಂಗಿಯಾಗುತ್ತಾನೆ. ಉದಾಹರಣೆಗೆ– ನಿವೃತ್ತನಾದ ನಂತರ ಮೊದಲಿನಂತೆ ಬೆಳಿಗ್ಗೆ 5 ಗಂಟೆಗೆಲ್ಲ ಹಾಸಿಗೆ ಬಿಟ್ಟೆದ್ದರೆ, 'ಯಾಕೆ ಇಷ್ಟು ಬೇಗ ಎದ್ದು ನಮಗೆ ಜೀವ ತಿನ್ತೀರಿ? ನಿಧಾನ ಏಳಬಹುದಲ್ಲ? ಎದ್ದು ಮಾಡೋದಾದರೂ ಏನು ನೀವು?' ಅಂತಾಳೆ. ಸರಿ ಎಂದು ಮಾರನೇ ದಿನದಿಂದ ಹಾಯಾಗಿ ಮಲಗಿ ನಿಧಾನಕ್ಕೆ 7 ಗಂಟೆಗೆ ಎದ್ದರೆ 'ಏನ್ರೀ, ಕುಂಭಕರ್ಣನ ಥರಾ ಸೂರ್ಯ ಎದ್ದು ಗಂಟೆಯಾದರೂ ಗೊರ್ರೀತಾ